9. ಮಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಬರುವ ಮೂಡುಶೆಡ್ಡೆಯಲ್ಲಿನ ಸರಕಾರಿ ಆಸ್ಪತ್ರೆಯಲ್ಲಿ ಎಕ್ಸರೇ ಉಪಕರಣ ಯಂತ್ರದ ದುರಸ್ತಿ

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಅಧ್ಯಕ್ಷರೇ, ಸುರತ್ಕಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಬರುವ ಮೂಡುಶೆಡ್ಡೆಯಲ್ಲಿನ ಸರಕಾರಿ ಆಸ್ಪತ್ರೆಯಲ್ಲಿ ಅಳವಡಿಸಲಾಗಿದ್ದ ಎಕ್ಸರೇ ತೆಗೆಸಿಕೊಳ್ಳಲು ಉಪಯೋಗಿಸುವ ಯಂತ್ರವು ಕಳೆದ ಮೂರು ವರ್ಷಗಳಿಂದ ಕೆಟ್ಟು ಹೋಗಿದ್ದು ಅದನ್ನು ರಿಪೇರಿ ಮಾಡಿಸಲು ಇಲಾಖಾ ಆಡಳಿತ ಯಂತ್ರವು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲವಾದ ಕಾರಣ ಸಾರ್ವಜನಿಕರಿಗೆ, ಬಡರೋಗಿಗಳಿಗೆ ತುಂಬಾ ಅನಾನುಕೂಲವಾಗಿದೆ. ರೋಗಿಗಳು ಎಕ್ಸರೇ ತೆಗೆಸಿಕೊಳ್ಳಲು ಮಂಗಳೂರಿಗೆ ಬಂದು ಹೋಗಬೇಕಾಗಿದ್ದು ವಿಶೇಷತಃ ಬಡ ಜನರಿಗೆ ಬಹಳಷ್ಟು ತೊಂದರೆಯುಂಟಾಗಿದೆ. ಆದ್ದರಿಂದ ಕೂಡಲೇ ಆ ಎಕ್ಸರೇ ಯಂತ್ರವನ್ನು ದುರಸ್ತಿ ಮಾಡಿಸುವ ಅಥವಾ ಹೊಸ ಯಂತ್ರವನ್ನು ಅಳವಡಿಸುವ ಕಾರ್ಯವನ್ನು ಮಾನ್ಯ ಆರೋಗ್ಯ ಸಚಿವರು ತ್ವರಿತವಾಗಿ ಜರುಗಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಆರೋಗ್ಯ ಸಚಿವರು ರೈಲ್ವೆ ಅಪಘಾತ ಆಗಿರುವ ಸ್ಥಳಕ್ಕೆ ಹೋಗಿದ್ದಾರೆ. ಅವರು ಬಂದ ನಂತರ ಉತ್ತರ ತರಿಸಿಕೊಡುತ್ತೇನೆ.

10. ವಿಜಾಪುರ ನಗರಕ್ಕೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ

ಶ್ರೀ ಶಿವಾನಂದ ಪಾಟೀಲ್ ಸಿದ್ರಾಮಪ್ಪ (ತಿಕೋಟ) : ಮಾನ್ಯ ಅಧ್ಯಕ್ಷರೇ, ವಿಜಾಪುರ ನಗರದಲ್ಲಿ ಜನಸಾಮಾನ್ಯರಿಗೆ ಕುಡಿಯುವ ನೀರು ಒದಗಿಸುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಕಳೆದ 15 ವರ್ಷಗಳಿಂದ ಜನ ಸಾಮಾನ್ಯರಿಗೆ ಸಿಕ್ಕಿದ್ದು ಬರೀ ಆಶ್ವಾಸನೆ ಮಾತ್ರ. ಈ ಗಂಭೀರವಾದ ವಿಷಯದ ಬಗ್ಗೆ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯಬಯಸುತ್ತೇನೆ. ಈಗಾಗಲೇ ನಗರಾಭಿವೃದ್ಧಿ ಸಚಿವರಿಗೆ ಈ ವಿಷಯದ ಬಗ್ಗೆ ಮನವರಿಕೆ ಮಾಡಿಕೊಡಲಾಗಿದೆ. ಬಿಜಾಪುರ ನಗರದ ಕುಡಿಯುವ ನೀರಿನ 2ನೇ ಹಂತದ ಯೋಜನೆಯನ್ನು ಹಿಂದಿನ ಸರ್ಕಾರದ ಮುಖ್ಯಮಂತ್ರಿಗಳಾದ ಮಾನ್ಯ ವೀರಪ್ಪ ಮೊಯ್ಲಿಯವರು ಬಿಜಾಪುರಕ್ಕೆ ಭೇಟಿ ಕೊಟ್ಟಾಗ, 1995ರೊಳಗೆ ಮುಗಿಸುತ್ತೇವೆ ಎನ್ನತಕ್ಕಂಥ ವಾಗ್ದಾನವನ್ನು ಮಾಡಿ ಹೋಗಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಖರ್ಗೆಯವರು ಜಿಲ್ಲೆಯ ಉಸ್ತುವಾರಿ ಸಚಿವರಾಗಿದ್ದರು. ಈ ಯೋಜನೆಯನ್ನು ಮುಗಿಸಬೇಕಾದರೆ ಇನ್ನೂ 14ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬೇಕಾದ ವಿಚಾರ ಇಷ್ಟೆ. 1995ರ ಮಾರ್ಚಿಯೊಳಗೆ ಮುಗಿಸಬೇಕಾದರೆ, ಇನ್ನೂ 14 ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡಬೇಕಾಗುತ್ತದೆ. ಆದಷ್ಟು ಶೀಘ್ರವಾಗಿ ಈ 14 ಕೋಟಿ ರೂಪಾಯಿಗಳನ್ನು ಸರ್ಕಾರ ಕೊಟ್ಟು, ಈ ಕಾರ್ಯವನ್ನು 1995ರ ಮಾರ್ಚಿಯೊಳಗೆ ಮುಗಿಸಬೇಕೆಂದು, ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಸವನಗೌಡ ಆರ್. ಪಾಟೀಲ್ (ಬಿಜಾಪುರ) : ಮಾನ್ಯ ಅಧ್ಯಕ್ಷರೇ, ಈ ಯೋಜನೆಗೆ 16 ಕೋಟಿ 70 ಲಕ್ಷ ರೂಪಾಯಿನಷ್ಟು ಆಡಳಿತಾತ್ಮಕ ಅನುದಾನವನ್ನು ಸರ್ಕಾರ ಕೊಟ್ಟರೂ ಸಹ, ಇದುವರೆಗೂ ಈ ಯೋಜನೆಗೆ ಸುಮಾರು 15 ಕೋಟಿ 41 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ಖರ್ಚಿನ ಅಂದಾಜು ನೋಡಿದರೆ, ಅರ್ಧಕ್ಕಿಂತ ಹೆಚ್ಚು ಕೆಲಸ 2ನೇ ಹಂತದ ಯೋಜನೆಗೆ ಆಗಿಲ್ಲ. ಇದರಲ್ಲಿ ಸಾಕಷ್ಟು ಭ್ರಷ್ಟಾಚಾರವಾಗಿದೆ. ಮಹಾರಾಷ್ಟ್ರ ರಾಜ್ಯದ ಸರ್ಕಾರದಿಂದ ತಿರಸ್ಕೃತವಾದ ಪೈಪುಗಳನ್ನು ಹಾಕಿ, ಈ ಯೋಜನೆಯಲ್ಲಿ ಭ್ರಷ್ಟಾಚಾರ ನಡೆದುದರಿಂದ,

ಸದರಿ ಯೋಜನೆ, ಮಾನ್ಯ ಸಚಿವರು ಹೇಳಿದಂತೆ, 1995ನೇ ಮಾರ್ಚ್ ಒಳಗೆ ಮುಗಿಯುವ ಯಾವುದೇ ಸೂಚನೆ ಕಾಣುತ್ತಾ ಇಲ್ಲ. ಬಿಜಾಪುರ ನಗರದವರು ಈ ಸಮಸ್ಯೆಯನ್ನು ಕಳೆದ 15-20 ವರ್ಷಗಳಿಂದ ಸತತವಾಗಿ ಎದುರಿಸುತ್ತಿದ್ದಾರೆ. ಒಂದು ತಿಂಗಳಿಗೆ ಎರಡು ಸಾರಿ ನೀರು ಬರುವಂಥ ಕೆಟ್ಟ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಅನುಭವಿಸುತ್ತಿರತಕ್ಕಂಥ, ಜಿಲ್ಲಾ ಕೇಂದ್ರವಾದ ಬಿಜಾಪುರಕ್ಕೆ ದಯಮಾಡಿ ಹೆಚ್ಚಿನ ಪ್ರಾಧಾನ್ಯತೆಯನ್ನು ಈ ಸರ್ಕಾರ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) : 1991 ಪ್ರಕಾರ ಬಿಜಾಪುರ ನಗರದ ಜನ ಸಂಖ್ಯೆಯು 1,93,038 ಮತ್ತು ಪ್ರಸಕ್ತ ಜನ ಸಂಖ್ಯೆಯು 2,04,000 ಈಗ ಹಾಲಿ ಇರುವ ಬಿಜಾಪುರ ನಗರದ ಕುಡಿಯುವ ನೀರಿನ ಮೂಲಗಳೆಂದರೆ, ಭೂತನಾಳ ಕೆರೆ, ಕೃಷ್ಣಾನದಿ ಮತ್ತು ಕೊಳವೆ ಬಾವಿಗಳು.

ಈಗ ಬಿಜಾಪುರ ನಗರಕ್ಕೆ 1.50 ಎಂ.ಜಿ.ಡಿ.ಗಳಷ್ಟು ನೀರನ್ನು ಭೂತನಾಳ ಕೆರೆಯಿಂದ ಮತ್ತು 1.50 ಎಂ.ಜಿ.ಡಿಯಷ್ಟು ನೀರನ್ನು ಕೃಷ್ಣಾನದಿಯಿಂದಲೂ ಸರಬರಾಜು ಮಾಡಲಾಗುತ್ತಿದೆ. ಇವುಗಳ ಜೊತೆ 53 ಕೊಳವೆ ಬಾವಿಗಳಿಗೆ ವಿದ್ಯುತ್ ಛಾಲಿತ ಪಂಪುಗಳನ್ನು ಮತ್ತು 230 ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಅಳವಡಿಸಲಾಗಿದ್ದು ಇವುಗಳು ಸುಸ್ಥಿತಿಯಲ್ಲಿರುತ್ತವೆ. ಈ ಕೊಳವೆ ಬಾವಿಗಳಿಂದ ದಿನಃ ಪ್ರತಿ 0.25 ಎಂ.ಜಿ.ಡಿ. ಯಷ್ಟು ನೀರನ್ನು ಸರಬರಾಜು ಮಾಡುತ್ತಿದ್ದು, ಒಟ್ಟು 3.25 ಎಂ.ಜಿ.ಡಿ.ಯಷ್ಟು ನೀರನ್ನು ಸರಬರಾಜು ಮಾಡಲಾಗುತ್ತಿದೆ. ಭೂತನಾಳ ಕೆರೆಯಲ್ಲಿ ಸಾಕಷ್ಟು ನೀರಿನ ಶೇಖರಣೆಯಿಲ್ಲದಿರುವುದರಿಂದ ಹಾಗೂ ಇರುವ ನೀರನ್ನು 1995ರ ಬೇಸಿಗೆ ತನಕ ಕಾಯ್ದಿರಿಸಿ ಕೊಳ್ಳುವ ದೃಷ್ಟಿಯಿಂದ ಹಾಲಿ ನೀರನ್ನು ಮೂರು ದಿನಗಳಿಗೊಮ್ಮೆ ಸರಬರಾಜು ಮಾಡಲಾಗುತ್ತಿದೆ. ಈ ಪ್ರಮಾಣದ ನೀರು ಬಿಜಾಪುರ ನಗರಕ್ಕೆ ಸಾಕಾಗುತ್ತಿಲ್ಲ. ಆದುದರಿಂದ ನೀರಿನ ಬವಣೆಯನ್ನು ನೀಗಿಸಲು ಮತ್ತು ಕುಡಿಯುವ ನೀರಿನ ಶಾಶ್ವತ ಪರಿಹಾರಕ್ಕಾಗಿ ಕೃಷ್ಣಾ ನದಿಯನ್ನು ಮೂಲವಾಗಿಟ್ಟುಕೊಂಡು ಬಿಜಾಪುರ ನಗರಕ್ಕೆ ವಿಸ್ತೃತ ಕುಡಿಯುವ ನೀರಿನ ಎರಡನೇ ಹಂತದ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಗೆ ರಾಜ್ಯ ಸರ್ಕಾರವು ತನ್ನ ಆಜ್ಞೆ ಸಂಖ್ಯೆ. ಹೆಚ್ಯುತಿ 214 ಯುಎಂಎಸ್ 89 ದಿನಾಂಕ 30.3.90 ರಲ್ಲಿ ರೂ. 16.70 ಕೋಟಿ ರೂ.ಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ.

ಈ ಯೋಜನೆಯನ್ನು ಪ್ರಾರಂಭಿಸಲಾಗಿದ್ದು, ಯೋಜನೆಯ ವಿವಿಧ ಭಾಗಗಳು ಪ್ರಗತಿಯಲ್ಲಿರುತ್ತದೆ. ಯೋಜನೆಯನ್ನು ತ್ವರಿತಗತಿಯಲ್ಲಿ ಮುಗಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಯೋಜನೆಯನ್ನು ಮಾರ್ಚ್ 1996 ಕ್ಕೆ ಚಾಲೂ ಮಾಡಲು ಉದ್ದೇಶಿಸಲಾಗಿದೆ. ಈವರೆವಿಗೆ ಈ ಯೋಜನೆಗೆ ಸುಮಾರು 15.41 ಕೋಟಿ ರೂ.ಗಳು ಖರ್ಚಾಗಿದೆ.

ಬಿಜಾಪುರ ನಗರ ಸಭೆಯು ನಿರ್ವಹಿಸುತ್ತಿದ್ದ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಯನ್ನು ಸುಧಾರಿಸಲು ಸರ್ಕಾರದ ಆದೇಶದ ಸಂಖ್ಯೆ ವನಇ 26 ಯುಡಬ್ಲ್ಯೂಎಸ್ 93 ದಿನಾಂಕ 1.10.93ರ ಪ್ರಕಾರ ದಿನಾಂಕ 21.10.1993ರಂದು ಮಂಡಲಿಯು ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಿಕೊಂಡಿದೆ. ಈಗ ನೀರು ಸರಬರಾಜು ವ್ಯವಸ್ಥೆಯನ್ನು ಉತ್ತಮಗೊಳಿಸಲಾಗುತ್ತಿದೆ.

ಅಧ್ಯಕ್ಷರು : ಮಾನ್ಯ ಜಗದೀಶ ಶೆಟ್ಟರ್‌ರವರು ಮತ್ತು ಅಶೋಕ ಕಾಟ್ವೆರವರು ತಾವು ಏನು ಹುಬ್ಬಳ್ಳಿ ನಗರದ ರಸ್ತೆಗಳ ಡಾಂಬರೀಕರಣಕ್ಕೆ ಸಂಬಂಧಿಸಿದಂತೆ

ಸೂಚನೆಯನ್ನು ಕಳುಹಿಸಿದ್ದೀರಿ ಅದಕ್ಕೆ ನಗರಾಭಿವೃದ್ಧಿ ಮಂತ್ರಿಗಳು 10 ದಿವಸ ಕಾಲ ಬೇಕಾಗುತ್ತದೆ. ಈ ಮಾಹಿತಿ ನನಗೆ ಇನ್ನೂ ಲಭ್ಯ ಆಗಿಲ್ಲ ಎಂದು ಹೇಳಿದ್ದಾರೆ. 10 ದಿವಸಗಳ ಒಳಗಾಗಿ ನಾನು ತಮಗೆ ಉತ್ತರ ಕಳುಹಿಸಿ ಕೊಡುತ್ತೇನೆ. ಆದ್ದರಿಂದ ತಾವು ಪ್ರಸ್ತಾಪ ಮಾಡಬೇಕಾದ ಅಗತ್ಯ ಇಲ್ಲ.

11. ಬಾಗೇಪಲ್ಲಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನಲ್ಲಿ ಕ್ಲೋರೈಡ್ ಕಂಟೆಂಟ್ ಇದ್ದು ಜನರಿಗೆ ತೊಂದರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಬಾಗೇಪಲ್ಲಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನಲ್ಲಿ ಕ್ಲೋರೈಡ್ ಕಂಟೆಂಟ್ ವಿಪರೀತವಾಗಿ ನ್ಯೂರ್ಯಾಸಿಸ್ ಎನ್ನತಕ್ಕಂಥ ಅಪಾಯಕರವಾದಂತಹ ಖಾಯಿಲೆ ಇದೆ ಅಂತ ಹೇಳಿ ಇತ್ತೀಚಿನ ಸರ್ವೆ ಪ್ರಕಾರ ಕಂಡು ಬಂದಿದ್ದು ಆ ನೀರನ್ನು ಕುಡಿಯಬಾರದು ಎಂದು ಹೇಳಿ ವೈದ್ಯರು ಮತ್ತು ವಿಜ್ಞಾನಿಗಳು ಸಲಹೆ ಮಾಡಿದ್ದಾರೆ. ಆದ್ದರಿಂದ ಕುಡಿಯುವ ನೀರಿಗೆ ಬಹಳ ತೊಂದರೆ ಆಗಿದೆ. ಇರತಕ್ಕಂಥ ನೀರನ್ನು ಸಹ ಕುಡಿಯುವುದಕ್ಕೆ ಅಲ್ಲಿನ ಜನ ಭಯಭೀತರಾಗಿದ್ದಾರೆ. ಅದರ ಜೊತೆಗೆ ಕುಡಿಯುವ ನೀರಿಗಾಗಿ ತೋಡಿರತಕ್ಕಂಥ ಕೊಳವೇ ಬಾವಿಗಳಲ್ಲಿ ಕೈ ಪಂಪ್ಗಳನ್ನು ಹಾಕುವುದಕ್ಕೂ ಕೂಡ ಸಂಬಂಧಪಟ್ಟ ಇಲಾಖೆಗಳು ಹಿಂಜರಿಯುತ್ತಿದ್ದಾರೆ. ಅಲ್ಲಿ ಕುಡಿಯುವ ನೀರಿಗೆ ಭಾರಿ ತೊಂದರೆ ಆಗಿದ್ದು ಅಪಾಯಕಾರಿಯಾದಂತಹ ಖಾಯಿಲೆ ಅಂದರೆ ಹಲ್ಲು ಮತ್ತು ಮೂಳೆಗಳ ಖಾಯಿಲೆ ಆಗಿ ಚಾಕ್ಪೀಸ್ ಪುಡಿ ರೂಪದಲ್ಲಿ ಮೂಳೆ ಮತ್ತು ಹಲ್ಲುಗಳು ಹೋಗುತ್ತದೆ ಎಂದು ಹೇಳತಕ್ಕಂಥ ಅಪಾಯಕಾರಿಯಾದ ಖಾಯಿಲೆ ಬರುವ ಸಾಧ್ಯತೆಗಳಿವೆ. ಆದ್ದರಿಂದ ಈ ಖಾಯಿಲೆಯನ್ನು ನಿವಾರಣೆ ಮಾಡುವುದಕ್ಕೋಸ್ಕರ ದೇಶದ ಕೆಲವು ಭಾಗದಲ್ಲಿ ಪಂಜಾಬಿನ ಚಂಡಿಗಡದಲ್ಲಿ ಆಂಧ್ರದ ಪುಟಪರ್ತಿ ಗ್ರಾಮದಲ್ಲಿ ನೀರಿನ ಟ್ಯಾಂಕರ್ಗಳಿಗೆ ಫಿಲ್ಟರ್ಗಳನ್ನು ಅಳವಡಿಸಿಬೇಕು. ಇಲ್ಲಿ ಕುಡಿಯುವ ನೀರು ಇಲ್ಲದೆ ಇಡೀ ತಾಲ್ಲೂಕಿನಲ್ಲಿ ಈ ಖಾಯಿಲೆಯಿಂದಾಗಿ ಜನ ಭಯಭೀತರಾಗಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ತಕ್ಷಣ ಇದನ್ನು ತುರ್ತು ಸಮಸ್ಯೆ ಎಂದು ಪರಿಗಣಿಸಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಸಭಾಧ್ಯಕ್ಷರ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಜೆ.ಎಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂಥ ವಿಷಯವನ್ನು ಸರ್ಕಾರ ಗಮನಿಸಿದೆ. ಅದಕ್ಕೆ ಸೂಕ್ತವಾದ ಕ್ರಮವನ್ನು ಏನು ಕೈಗೊಳ್ಳುತ್ತೇವೆಂಬುದರ ಬಗ್ಗೆ ಮಾನ್ಯ ಸದಸ್ಯರಿಗೆ ಬರೆದು ತಿಳಿಸುತ್ತೇನೆ.

ಶ್ರೀ ಯು.ಬಿ. ಬಣಕಾರ್ : ಮಾನ್ಯ ಅಧ್ಯಕ್ಷರೇ, ಅವರು ನನಗೆ ಒಂದು ಆಥರೈಸೇಷನ್ ಲೆಟರ್ ಕೊಟ್ಟಿದ್ದಾರೆ. ನಾನೇ ಓದಿಬಿಡುತ್ತೇನೆ. ಅಕ್ಕಾಯ್ ಸಮಿತಿಗಳನ್ನು ರದ್ದು ಮಾಡಿದ್ದರ ಬಗ್ಗೆ ಅವರು ಗಮನಸೆಳೆದಿದ್ದಾರೆ.

ಅಧ್ಯಕ್ಷರು : ನನಗೆ ಬಂದಿಲ್ಲವಲ್ಲಾ, ಅವರು ಗಮನ ಸೆಳೆದಿಲ್ಲ ಬಣಕಾರ್ರವರೇ, ಅವರು 351ನೇ ನಿಯಮಾವಳಿ ಪ್ರಕಾರ ನೋಟೀಸ್ ಕೊಟ್ಟಿದ್ದರು. ಕೊಟ್ಟಿರತಕ್ಕಂಥವರೇ ಪ್ರಸ್ತಾಪ ಮಾಡಬೇಕು. ಅವರು ಗೈರು ಹಾಜರಾಗುವುದಾದರೆ ಅವರ ಪರವಾಗಿ ತಾವು ಕೇಳಲು ಆಥರೈಸೇಷನ್ ಕೊಟ್ಟಿದ್ದರೆ ಅದನ್ನು ಬರೆದು ನನಗೆ ಮೊದಲು ತಿಳಿಸಬೇಕು. ಆ ರೀತಿ ಆಗಿಲ್ಲ, ಆದ್ದರಿಂದ ತಾವು ಸುಮ್ಮನೆ ಇದ್ದುಬಿಡಿ.

12. ಶ್ರವಣಬೆಳಗೊಳ ಕ್ಷೇತ್ರದ ಎ.ಜಿ. ರಾಮಚಂದ್ರರಾಯರ ನಾಲೆ ವಿಚಾರ

ಶ್ರೀ ಸಿ.ಎಸ್. ಪುಟ್ಟೇಗೌಡ (ಚನ್ನರಾಯಪಟ್ಟಣ) : ಮಾನ್ಯ ಅಧ್ಯಕ್ಷರೇ, ನಮ್ಮ ಶ್ರವಣಬೆಳಗೊಳ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಎ.ಜಿ. ರಾಮಚಂದ್ರರಾಯರ ನಾಲೆ ಹರಿದು